ಆಫೀಸಿನಲ್ಲೆಲ್ಲಾ ಒಂದು ಸುತ್ತು ಗಡಿಬಿಡಿಯಿಂದ ಅಡ್ಡಾಡಿ ಬಂದ. ಯಾರಾದರೂ ತಾನು ಮರ್ಸಿಡೀಸಿನಲ್ಲಿ ಬಂದು ಇಳಿದದ್ದನ್ನು ನೋಡಿರಬಹುದೇ, ಅದರ ಬಗ್ಗೆ ಕೇಳಬಹುದೇ ಎಂದು ನಿರೀಕ್ಷಿಸಿದ. ಯಾರೂ ಆ ಕುರಿತು ಮಾತನಾಡಿಸಲಿಲ್ಲವಾದ್ದರಿಂದ ನಿರಾಶೆಯಾಯಿತು. ಪುನಃ ಪ್ಯಾಂಟ್ರಿಗೆ ಬಂದವನೇ ಅಲ್ಲಿ ಕಪ್ಪು ತೊಳೆಯುತ್ತಾ ನಿಂತಿದ್ದ ಪರಮೇಶನಲ್ಲಿ, "ಇವತ್ತು ಜೇಕೆ ಸಾರ್ ಅವರ ಕಾರಿನಲ್ಲಿ ನನ್ನನ್ನು ಕಳಿಸಿಕೊಟ್ರು ಗೊತ್ತಾ?" ಅಂದ. ಆಫೀಸು ಪ್ರವೇಶಿಸುತ್ತಿರುವಂತೇ ಶಿವರಾಜ ಇಷ್ಟೊಂದು ಹಾರಾಡಿದ್ದರ ಕಾರಣ ಇದೇ ಎಂದು ಅರಿತ ಪರಮೇಶ, "ನೀನೇನ್ ಬಿಡು ಗುರೂ, ಯಾವಾಗ್ಲೂ ಸೂಪ್ಪರೂ" ಅಂದ.

ಶಿವರಾಜ ಅಲಿಯಾಸ್ ಸಮಾಧಿ ಶಿವು ಬೆಂಗಳೂರಿನ ಈ ಕಂಪನಿಯಲ್ಲಿ ಆಫೀಸ್ ಬಾಯ್ ಆಗಿ ಕೆಲಸಕ್ಕೆ ಸೇರಿ ಹತ್ತು ವರ್ಷಗಳ ಮೇಲಾಗಿದೆ. ಕಂಪನಿಯ ಮಾಲೀಕ ಜಯಕೃಷ್ಣ ಹೊಸ ಕಂಪನಿ ಶುರು ಮಾಡಿದಾಗಿನಿಂದ ಅವರ ಜೊತೆಯಲ್ಲೇ ಇದ್ದಾನೆ. ಹೀಗಾಗಿ ಜಯಕೃಷ್ಣರ ಆಪ್ತವಲಯದಲ್ಲಿ ಆತನಿಗೂ ಜಾಗ ದಕ್ಕಿದೆ. 'ಈ ಕಂಪನಿಯ ಮೊದಲನೇ ಎಂಪ್ಲಾಯಿ ನಾನು, ಎರಡನೆಯವ ಶಿವರಾಜ' ಅಂತ ಅವರೇ ಹಲವು ಬಾರಿ ಹೇಳಿದ್ದಿದೆ. ಹೀಗಾಗಿ ಸಮಾಧಿ ಶಿವು ಕಂಪನಿಯಲ್ಲಿ ತನ್ನದೇ ಆದ ಸ್ಥಾನ ಸೃಷ್ಟಿಸಿಕೊಂಡಿದ್ದಾನೆ. ಆಫೀಸ್ ಬಾಯ್ ಆಗಿದ್ದರೂ ಆತನ ಗತ್ತೇ ಬೇರೆ. ಹೊಸದಾಗಿ ಸೇರಿದ ಉದ್ಯೋಗಿಗಳಿಗೆಲ್ಲಾ ಆತ ಕ್ಯಾರೇ ಮಾಡುವುದಿಲ್ಲ. ಆತನಿಗೆ ಅವರು ಯಾವುದೇ ಕೆಲಸ ಹೇಳುವಂತಿಲ್ಲ. ಹಾವಭಾವದಲ್ಲೇ ಅಸಮಾಧಾನ ವ್ಯಕ್ತಪಡಿಸುತ್ತಾನೆ. ಅಥವಾ ಎದುರಿಗೇ ಓಡಾಡುತ್ತಿದ್ದರೂ ಅವರ ಕೆಲಸ ಮಾಡದೇ, ಬೇರೆ ಯಾವುದೋ ಅತಿ ಮುಖ್ಯ ಕೆಲಸದಲ್ಲಿ ತಾನು ಮುಳುಗಿರುವವನಂತೆ ನಟಿಸುತ್ತಾನೆ. ಒಟ್ಟಿನಲ್ಲಿ ಆತನಿಗೆ ಕೆಲಸ ಹೇಳಲು ಅವರು ಹಿಂಜರಿಯಬೇಕು. ಆತ ಜಯಕೃಷ್ಣರ ಗೂಢಾಚಾರನೂ ಹೌದೆಂಬ ಶಂಕೆ ಎಲ್ಲರಿಗೂ ಇರುವುದರಿಂದ ಆತನ ತಂಟೆಗೆ ಹೋಗಲು ಒಂಥರಾ ಭಯ. ಇತರೆ ಆಫೀಸ್ ಬಾಯ್‌ಗಳಂತೆ ಆತನನ್ನು ನಡೆಸಿಕೊಳ್ಳಲು ಆಗುವುದಿಲ್ಲ ಅವರಿಗೆ. ಉಳಿದಂತೆ ಆಫೀಸಿನ ಕ್ಲೀನರುಗಳಿಗೆ, ಡ್ರೈವರು, ಸೆಕ್ಯೂರಿಟಿ ಗಾರ್ಡು, ಮೆಂಟೇನೆನ್ಸ್ ಹುಡುಗರಿಗೆಲ್ಲಾ ಶಿವುನೇ ಬಾಸ್. ಆತ ಹಾಕಿದ ಗೆರೆಯನ್ನು ದಾಟುವಂತಿಲ್ಲ ಅವರು. ಹೀಗಾಗಿ ಆತ ಒಂಥರಾ ಕಂಪನಿಯ ಸ್ವಯಂಘೋಷಿತ **COB**, ಚೀಫ್ ಆಫೀಸ್ ಬಾಯ್.

ಮೊದಲಿನಿಂದಲೂ ಇದ್ದಾನೆ ಎನ್ನುವ ಒಂದೇ ಕಾರಣಕ್ಕೆ ಆತನಿಗೆ ಈ ಪಟ್ಟ ದಕ್ಕಿದ್ದಲ್ಲ. ಕಂಪನಿಯ ಅನೇಕ ಆಗು ಹೋಗುಗಳಲ್ಲೆಲ್ಲಾ ಆತನ ಪಾತ್ರವಿದೆ. ಆಫೀಸ್ ಬಾಯ್ ಕೆಲಸಕ್ಕಿಂತ ಇತರೇ ಕೆಲಸಗಳಲ್ಲೇ ಆತ ಹೆಚ್ಚು ನಿರತ. ಅಗತ್ಯ ಬಿದ್ದರೆ ಜಯಕೃಷ್ಣರ ಮಕ್ಕಳನ್ನು ಶಾಲೆಯಿಂದ ಮನೆಗೆ ಕರೆದುಕೊಂಡು ಬರುತ್ತಾನೆ. ರಿಸೆಪ್ಷನಿಸ್ಟ್ ರಜೆಯಲ್ಲಿದ್ದರೆ ಎದುರು ಡೆಸ್ಕಿನ ಸ್ವಾಗತಕಾರನೂ ಆಗುತ್ತಾನೆ. ಪಿಯುಸಿ ಮುಗಿಸಿರುವ, ಹೆಚ್ಚು ಕಡಿಮೆ ಇಂಗ್ಲಿಷು ಬಲ್ಲ, ಹಿಂದಿಯನ್ನೂ ಮಾತನಾಡಲು ಕಲಿತಿರುವ ಅವನಿಗೆ ಕನ್ನಡ ವಾತಾವರಣವಿಲ್ಲದ ಆ ಆಫೀಸಿನಲ್ಲಿ ತೊಂದರೆಯೇನೂ ಆಗಿಲ್ಲ. ಹಾಗೆ ನೋಡಿದರೆ ಆಫೀಸಿನ ಬೆರಳೆಣಿಕೆಯಷ್ಟು ಕನ್ನಡಿಗರಲ್ಲಿ ಆತನೂ ಒಬ್ಬ. ಉಳಿದ ಸಮಯದಲ್ಲಿ ಕವಡೆ ಕಿಮ್ಮತ್ತಿಲ್ಲದಿದ್ದರೂ ನವೆಂಬರ್ ಒಂದು, ಕಾವೇರಿ ಬಂದ್‌ಗಳ ಸಂದರ್ಭದಲ್ಲೆಲ್ಲಾ ಆತನ 'ಕನ್ನಡಿಗ ಬ್ರಾಂಡ್'ಗೆ ಸಿಕ್ಕಾಪಟ್ಟೆ ಬೆಲೆ ಬಂದು ಬಿಡುತ್ತದೆ. ಸರಕಾರಿ ರಜೆ ಘೋಷಿತವಾಗಿರುವಾಗಲೂ ಹೊರಗಡೆ ಬಾಗಿಲು ಮುಚ್ಚಿ ಒಳಗಡೆಯಿಂದ ಕೆಲಸ ನಡೆಯುವಂತೆ ನೋಡಿಕೊಳ್ಳುವ ಪೂರ್ಣ ಜವಾಬ್ದಾರಿ ಆತನದೇ.

ಹೀಗೊಮ್ಮೆ, ಕಾವೇರಿ ಗಲಾಟೆ ಸಂದರ್ಭದಲ್ಲಿ, ಒಳಗಡೆ ಕೆಲಸ ಮಾಡುತ್ತಿದ್ದಾರೆ ಎನ್ನುವ ಸಂಶಯದಿಂದ ಒಂದಿಷ್ಟು ಕನ್ನಡ ಹೋರಾಟಗಾರರು ಬಂದು ಆಫೀಸಿನ ಗೇಟಿನೆದುರು ಗಲಾಟೆ ಮಾಡಿ ಸೆಕ್ಯುರಿಟಿ ಗಾರ್ಡಿಗೆ ಹೊಡೆದು ಹೋಗಿದ್ದರು. ಚಿತ್ರದುರ್ಗದ ಕಡೆಯವನಾಗಿದ್ದ ಆ ಸೆಕ್ಯುರಿಟಿ ಗಾರ್ಡನ್ನು ನಂತರ ಆಸ್ಪತ್ರೆಗೆ ಸೇರಿಸಿ, ಆ ಖರ್ಚು ವೆಚ್ಚವನ್ನೆಲ್ಲಾ ಕಂಪನಿಯೇ ನೋಡಿಕೊಳ್ಳಬೇಕಾಗಿ